ಶೇ.55 ರಷ್ಟು ವಸತಿ ನಿವೇಶನಗಳನ್ನಾಗಿ ವಿಂಗಡಿಸಿ ಶೇ.60:40 ರನ್ವಯ ಹೊಸ ಆಯ್ಕೆ ಯೋಜನೆಗೆ ತಾತ್ವಿಕ ಅನುಮೋದನೆಯನ್ನು ನೀಡಲಾಗಿದೆ.

ಈ) ಹೌದು.

ಬೇಹುಗಾರಿಕೆ ಇಲಾಖೆಗೆ ಸಿಬ್ಬಂದಿ ವ್ಯವಸ್ಥೆ

786(1122) ಶ್ರೀ ಹ್ಯಾರಿಸ್ ಎನ್ ಎ:(ಶಾಂತಿನಗರ) ಮಾನ್ಯ ಗೃಹ ಮತ್ತು ಮುಜರಾಯಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಬೇಹುಗಾರಿಕೆಗೆ ಮಂಜೂರಾದ ವಿವಿಧ ವರ್ಗಗಳ ಒಟ್ಟು ಹುದ್ದೆಗಳೆಷ್ಟು ಮತ್ತು ಖಾಲಿ ಇರುವ ಎಲ್ಲಾ ಹುದ್ದೆಗಳ ಸಂಖ್ಯೆ ಎಷ್ಟು?

ಆ) ಖಾಲಿ ಹುದ್ದೆಗಳನ್ನು ತುಂಬಲು ಸರ್ಕಾರ ಕೈಗೊಂಡ ಕ್ರಮಗಳೇನು;

ಇ) ರಾಜ್ಯದ ಎಲ್ಲಾ ಜಿಲ್ಲೆಗಳ ಮಾಹಿತಿ ಸಂಗ್ರಹಿಸುವ ಮಹತ್ಕಾರ್ಯವನ್ನು ನಿರ್ವಹಿಸುವ ಅಧಿಕಾರಿ ವರ್ಗದ ಕೊರತೆಯಿಂದ ಇಲಾಖೆ ಹಿನ್ನೆಡೆ ಸಾಧಿಸಿರುವುದು ನಿಜವೇ;

ಈ) ಹಾಗಿದ್ದಲ್ಲಿ, ಸಮರ್ಪಕ ಸಿಬ್ಬಂದಿ ವರ್ಗದ ನೇಮಕ ಮತ್ತು ಸಕಾಲಿಕ ಕ್ರಮ ಜರುಗಿಸಲಾಗುವುದೇ?

ಶ್ರೀ ಡಾ ವಿ ಎಸ್ ಆಚಾರ್ಯ(ಗೃಹ ಮತ್ತು ಮುಜರಾಯಿ ಸಚಿವರು)

ಅ)

ರಾಜ್ಯ ಗುಪ್ತವಾರ್ತೆಗೆ ಮಂಜೂರಾದ ವಿವಿಧ ವರ್ಗಗಳ ಒಟ್ಟು ಹುದ್ದೆಗಳು ಹಾಗೂ ಖಾಲಿ ಇರುವ ಹುದ್ದೆಗಳ ವಿವರ ಈ ಕೆಳಕಂಡಂತಿದೆ.

ಹುದ್ದೆ	ಮಂಜೂರಾತಿ ಹುದ್ದೆ	ಪ್ರಸ್ತುತ ಹುದ್ದೆ	ಖಾಲಿ ಹುದ್ದೆ
ಎಡಿಜಿಪಿ	1	1	0
ಐಜಿಪಿ	1	1	0
ಡಿಐಜಿಪಿ	2	2	0

ಎಸ್‌ಪಿ (ಐಪಿಎಸ್)	2	2	0
ಎಸ್‌ಪಿ (ನಾನ್ ಐಪಿಎಸ್)	9	9	0
ಡಿವೈಎಸ್‌ಪಿ	40	40	0
ಪಿಐ	74	64	10
ಪಿಎಸ್‌ಐ	200	110	90
ಆರ್‌ಎಸ್‌ಐ	24	10	14
ಎಎಸ್‌ಐ	40	27	13
ಹೆಚ್‌ಸಿ	305	251	54
ಪಿಸಿ	592	421	171
ಒಟ್ಟು	**1290**	**938**	**352**

ಆ) ರಾಜ್ಯ ಗುಪ್ತವಾರ್ತೆ ಘಟಕದಲ್ಲಿ ಎರವಲು ಸೇವೆ ಮೇಲೆ ಸಿಬ್ಬಂದಿಗಳು ಕರ್ತವ್ಯ ನಿರ್ವಹಿಸುತ್ತಿದ್ದು, ಹಾಗೂ ಈ ಘಟಕದಲ್ಲಿ ಕರ್ತವ್ಯ ನಿರ್ವಹಿಸಲು ಇಚ್ಚಿಸಿ ಮನವಿ ಸಲ್ಲಿಸುತ್ತಿರುವ ಸಿಬ್ಬಂದಿಗಳ ಅರ್ಜಿಯನ್ನು ಪಡೆದು ಹಿರಿಯ ಅಧಿಕಾರಿಗಳಿಂದ ಸಂದರ್ಶನಕ್ಕೆ ಒಳಪಡಿಸಿ ಸೂಕ್ತ ಅಭ್ಯರ್ಥಿಗಳನ್ನು ಖಾಲಿ ಇರುವ ಹುದ್ದೆಗಳಿಗೆ ನಿಯೋಜನೆ ಮೇಲೆ ತುಂಬಲಾಗುವುದು. ಇದು ನಿರಂತರ ಪ್ರಕ್ರಿಯೆಯಾಗಿರುತ್ತದೆ.

ಇ) ರಾಜ್ಯ ಗುಪ್ತವಾರ್ತೆ ಘಟಕದಲ್ಲಿ ಮಾಹಿತಿಯನ್ನು ಕಲೆ ಹಾಕಲು ಅದರದೇ ಆದ ಅಧಿಕಾರಿ ಆದ ಅಧಿಕಾರಿ ಮತ್ತು ಸಿಬ್ಬಂದಿಗಳನ್ನೊಳಗೊಂಡ ಜಾಲವಿದ್ದು, ಅದು ಪ್ರತಿ ತಾಲ್ಲೂಕು ಮಟ್ಟದವರೆಗೆ ಪಸರಿಸಿರುತ್ತದೆ. ನಮ್ಮ ರಾಜ್ಯದಲ್ಲಿ ಎಲ್ಲಾ 175 ತಾಲ್ಲೂಕುಗಳಲ್ಲಿಯೂ ಸಿಬ್ಬಂದಿಗಳು ನೇಮಕವಾಗಿದ್ದು ಹಾಗೂ ರಾಜ್ಯ ಗುಪ್ತವಾರ್ತೆಯ 05 ವಿಭಾಗಗಳನ್ನೊಳಗೊಂಡಿದ್ದು, ಎಲ್ಲಾ ವಿಭಾಗಗಳಲ್ಲಿ ಎಸ್‌ಪಿ ಹುದ್ದೆಯ ಅಧಿಕಾರಿಗಳು ಕರ್ತವ್ಯ ನಿರ್ವಹಿಸುತ್ತಿರುವುದರಿಂದ ಅಧಿಕಾರಿ ವರ್ಗದ ಕೊರತೆಯಿಂದ ಇಲಾಖೆ ಹಿನ್ನೆಡೆ ಸಾಧಿಸಿರುವುದು ಸತ್ಯಕ್ಕೆ ದೂರವಾದ ಸಂಗತಿಯಾಗಿದೆ.

ಈ) ಈ ಪ್ರಶ್ನೆಯು ಉದ್ಭವಿಸುವುದಿಲ್ಲ.

ಮೇಲಿನ ಪಟ್ಟಿಯಲ್ಲಿನ ಅಧಿಕಾರಿ / ಸಿಬ್ಬಂದಿಯ ವಿವರಗಳು ಕೇವಲ ರಾಜ್ಯ ಗುಪ್ತವಾರ್ತೆ ವಿಭಾಗಕ್ಕೆ ಮಾತ್ರ ಸಂಬಂಧಪಟ್ಟಿರುತ್ತದೆ. ಅಲ್ಲದೆ ಬೇಹುಗಾರಿಕೆಯ ಸಿಬ್ಬಂದಿಯು ರಾಜ್ಯದ ಎಲ್ಲಾ ಜಿಲ್ಲಾ ಪೊಲೀಸ್ ಅಧೀಕ್ಷಕರ ಹಾಗೂ ಬೆಂಗಳೂರು / ಮೈಸೂರು / ಹುಬ್ಬಳ್ಳಿ-ಧಾರವಾಡ ಪೊಲೀಸ್ ಆಯುಕ್ತರ ಅಧೀನದಲ್ಲಿನ ವಿಶೇಷ ಶಾಖೆಗಳಲ್ಲಿ ಹಾಗೂ ಪೊಲೀಸ್ ಠಾಣೆಗಳಲ್ಲಿಯೂ ಸಹ ಕರ್ತವ್ಯ ನಿರ್ವಹಿಸುತ್ತಿದೆ.

ರಾಜ್ಯದ ಎಲ್ಲಾ ತಾಲ್ಲೂಕುಗಳಿಗೆ ಅಗ್ನಿಶಾಮಕ ದಳ ವ್ಯವಸ್ಥೆಗೊಳಿಸುವುದು

787(1123) ಶ್ರೀ ಹ್ಯಾರೀಸ್ ಎನ್ ಎ:(ಶಾಂತಿನಗರ) ಮಾನ್ಯ ಗೃಹ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದ ಎಷ್ಟು ತಾಲ್ಲೂಕುಗಳಿಗೆ ಅಗ್ನಿಶಾಮಕ ಠಾಣೆ ವ್ಯವಸ್ಥೆಯನ್ನು ಒದಗಿಸಿಕೊಟ್ಟಿಲ್ಲ:

ಆ) ಅಗ್ನಿಶಾಮಕ ದಳಗಳ ಸ್ಥಾಪನೆ ಮತ್ತು ಆಧುನೀಕರಣಕ್ಕಾಗಿ ಪ್ರಸಕ್ತ ಸಾಲಿಗೆ ಒದಗಿಸಿದ ಅನುದಾನವೆಷ್ಟು;

ಇ) ತುರ್ತು ಸಂದರ್ಭಗಳಲ್ಲಿ ಜೀವದ ಹಂಗು ತೊರೆದು ಕರ್ತವ್ಯ ನಿರ್ವಹಿಸುವ ಅಗ್ನಿಶಾಮಕ ಸಿಬ್ಬಂದಿಗೆ ಹೆಚ್ಚಿನ ಸೌಲಭ್ಯಗಳನ್ನು ಒದಗಿಸಲು ಸರ್ಕಾರ ಕ್ರಮ ಜರುಗಿಸುವುದೇ?

ಶ್ರೀ ಡಾ ಏ ಎಸ್ ಆಚಾರ್ಯ(ಗೃಹ ಸಚಿವರು)

ಅ) ಸರ್ಕಾರವು ರಾಜ್ಯದ 176 ತಾಲ್ಲೂಕುಗಳ ಪೈಕಿ 41 ತಾಲ್ಲೂಕುಗಳಲ್ಲಿ ಅಗ್ನಿಶಾಮಕ ಠಾಣೆಯನ್ನು ಇನ್ನು ಪ್ರಾರಂಭಿಸಬೇಕಾಗಿದೆ.

ಆ) ಪ್ರಸಕ್ತ 2010-2011ನೇ ಸಾಲಿನಲ್ಲಿ ಅಗ್ನಿಶಾಮಕ ಠಾಣೆ ಸ್ಥಾಪನೆ ಹಾಗೂ ಆಧುನೀಕರಣಕ್ಕಾಗಿ ರೂ.31.00 ಕೋಟಿ ಅನುದಾನ ಒದಗಿಸಿದೆ. ಇದಲ್ಲದೇ ಇನ್ನು ಹೆಚ್ಚುವರಿಯಾಗಿ ರೂ.1000ಕೋಟಿ ಅನುದಾನವನ್ನು ನೀಡಲು ತಾತ್ವಿಕ ಒಪ್ಪಿಗೆ ನೀಡಿದೆ. (ಒಟ್ಟು ರೂ.41.00ಕೋಟಿ)